ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 40-45
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ರೇಷ್ಮೆ ಕೃಷಿ ಬೆಳೆಗಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ : ಒಂದು ಅಧ್ಯಯನ (ರಾಮನಗರ ಜಿಲ್ಲೆಯನ್ನು ಅವಲೋಕಿಸಿ)

**ಡಾ. ರವಿಚಂದ್ರ ಸಿ.ಎಸ್**
ಉಪನ್ಯಾಸಕರು, ಸಮಾಜಶಾಸ್ತ್ರ ವಿಭಾಗ, ರಾಮನಗರ ಸ್ನಾತಕೋತ್ತರ ಕೇಂದ್ರ, ರಾಮನಗರ.

**Abstract:**
*ಭಾರತವು ಕೃಷಿ ಪ್ರಧಾನವಾದ ರಾಷ್ಟ್ರವಾಗಿದ್ದು, ಶೇ.70 ರಷ್ಟು ಜನರು ಇಂದಿಗೂ ಸಹಾ ಹಳ್ಳಿಗಳಲ್ಲಿಯೇ ವಾಸಿಸುತ್ತಿದ್ದು ಕೃಷಿಯನ್ನು ಪ್ರಮುಖ ಕಸುಬನ್ನಾಗಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಕೃಷಿಯ ಜೊತೆಗೆ ಉಪಕಸುಬುಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಅದರಲ್ಲಿ ಹೈನುಗಾರಿಕೆ ಕುರಿ, ಕೋಳಿ, ಜೇನು ಸಾಕಣೆ ಹಾಗೂ ರೇಷ್ಮೆ ಉತ್ಪಾದನೆ. ಭಾರತದಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ರೇಷ್ಮೆ ಉತ್ಪಾದನೆಯನ್ನು ಮಾಡುತ್ತಿದ್ದಾರೆ. ಅದರಲ್ಲಿ ಕರ್ನಾಟಕ ರಾಜ್ಯ ರೇಷ್ಮೆ ಉತ್ಪಾದಿಸುವ ಅತಿದೊಡ್ಡ ರಾಜ್ಯವಾಗಿದೆ. ಕೃಷಿಯನ್ನು ಮಾಡುವುದರ ಜೊತೆಗೆ ರೇಷ್ಮೆ ಬೆಳೆಯನ್ನು ಬೆಳೆಯುತ್ತಾ ತಮ್ಮ ಜೀವನದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಭಾರತದಲ್ಲಿ 2.8 ಲಕ್ಷ ಹೆಕ್ಟೇರ್‌ಗಳಷ್ಟು ಹಿಪ್ಪುನೇರಳೆಯನ್ನು ಸಾಗುವಳಿ ಮಾಡಲಾಗುತ್ತಿದೆ. ಸುಮಾರು 8 ಮಿಲಿಯನ್ ಜನರು ರೇಷ್ಮೆ ಉತ್ಪಾದನೆಯಲ್ಲಿ ತೊಡಗಿದ್ದಾರೆ. ರೇಷ್ಮೆ ಬೆಳೆಯು ಲಾಭದಾಯಕ ಉದ್ದಿಮೆಯಾಗಿದ್ದು ಹಿಂದಿನ ಕಾಲದಿಂದಲೂ ಸಹ ಅಸ್ತಿತ್ವದಲ್ಲಿದೆ. ಆದರೆ ಕಾಲದಿಂದ ಕಾಲಕ್ಕೆ ರೇಷ್ಮೆ ಬೆಳೆಗೂ ಸಹ ರೋಗಗಳು ಹೆಚ್ಚಿನದಾಗಿ ಹರಡಿ ಬೆಲೆಯು ಸಿಗದೇ ಹಾಕಿದ ಬಂಡವಾಳವು ಸಹಾ ಸಿಗುವುದಿಲ್ಲ. ರೇಷ್ಮೆ ಬೆಳೆಯಲ್ಲಿ ನೀರಾವರಿ, ಬಂಡವಾಳ ಸಮಸ್ಯೆ ಹಾಗೆಯೇ ಬೆಳೆಗೆ ದೊರೆಯದ ಬೆಲೆ ಮತ್ತು ಪ್ರೋತ್ಸಾಹ ಇಂತಹ ಹಲವಾರು ಪ್ರಮುಖ ಸಮಸ್ಯೆಗಳನ್ನು ರೈತರು ಎದುರಿಸುತ್ತಿದ್ದಾರೆ.*

**Keywords:** *ರೇಷ್ಮೆ ಕೃಷಿ, ರಾಮನಗರ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ.*

**ಪೀಠಿಕೆ**

ಕರ್ನಾಟಕವು ಭಾರತದಲ್ಲಿಯೇ ಅತಿ ಹೆಚ್ಚು ರೇಷ್ಮೆ ಉತ್ಪಾದನೆ ಮಾಡುವ ರಾಜ್ಯವಾಗಿದೆ. ಶೇ.88 ರಷ್ಟು ರೇಷ್ಮೆ ಉತ್ಪಾದನೆ ಕರ್ನಾಟಕದಲ್ಲಿಯೇ ಆಗುತ್ತಿದೆ. ಅದರಲ್ಲಿ ರಾಮನಗರ ಜಿಲ್ಲೆಯಲ್ಲಿಯೇ ಶೇ.60 ರಷ್ಟು ರೇಷ್ಮೆ ಉತ್ಪಾದನೆ ಮಾಡಲಾಗುತ್ತಿದೆ. ರಾಮನಗರದ ಜನರ ಜೀವನಾಡಿಯಾಗಿರುವ ರೇಷ್ಮೆ ಬೆಳೆಯನ್ನು ರೈತರು ಹೆಚ್ಚಾಗಿ ಬೆಳೆಯುತ್ತಾ ಅಭಿವೃದ್ಧಿಯತ್ತ ಸಾಗುತ್ತಿರುವುದು ಒಂದು ಕಡೆಯಾದರೆ ಸರ್ಕಾರವು ಅನುಸರಿಸುತ್ತಿರುವ ಕೆಲವು ನೀತಿಗಳಿಂದಾಗಿ ರೇಷ್ಮೆ ಬೆಳೆಗಾರರು ಉತ್ಪಾದನೆಯನ್ನು ಕೈ ಬಿಡುವ ಯೋಚನೆಯನ್ನು ಮಾಡುತ್ತಿದ್ದಾರೆ. ಏಕೆಂದರೆ ಸರ್ಕಾರವು ಹೆಚ್ಚಿನದಾಗಿ ರೇಷ್ಮೆಯನ್ನು ಬೇರೆ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ಸಂದರ್ಭದಲ್ಲಿ ಆಮದು ಸುಂಕವನ್ನು ಕಡಿಮೆ ಮಾಡಿ

**Please cite this article as:** ರವಿಚಂದ್ರ ಸಿ.ಎಸ್. (2024). ರೇಷ್ಮೆ ಕೃಷಿ ಬೆಳೆಗಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ : ಒಂದು ಅಧ್ಯಯನ (ರಾಮನಗರ ಜಿಲ್ಲೆಯನ್ನು ಅವಲೋಕಿಸಿ). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 40–45

ಬೇರೆ ದೇಶದ ರೇಷ್ಮೆಗೆ ಹೆಚ್ಚಿನ ಬೇಡಿಕೆಯನ್ನು ನೀಡುವುದರಿಂದ ರೇಷ್ಮೆ ಬೆಳೆಗಾರರಿಗೆ ಆರ್ಥಿಕ ಸಂಕಷ್ಟ ಎದುರಾಗಿ ರೇಷ್ಮೆ ಬೆಳೆಯನ್ನು ಬಿಡುವತ್ತ ಮುಖ ಮಾಡಿದ್ದಾರೆ. ಇತಂಹ ಅನೇಕ ಸಮಸ್ಯೆಗಳಿಂದ ರೇಷ್ಮೆ ಬೆಳೆಯ ಉತ್ಪಾದನೆ ಕುಂಠಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಚೀನಾದ ವಸ್ತುಗಳು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಲಗ್ಗೆ ಇಟ್ಟಿರುವ ಕಾರಣ ಇತರ ದೇಶದ ವಸ್ತುಗಳ ಬೇಡಿಕೆ ನೆಲ ಕಚ್ಚಿದೆ.ಅದರಲ್ಲಿ ರೇಷ್ಮೆ ಬೆಳೆಯು ಸಹ ಒಂದಾಗಿದೆ. ಆದ್ದರಿಂದ ರೇಷ್ಮೆ ಉತ್ಪಾದನೆಯ ಕಡೆಗೆ ಹೆಚ್ಚಿನ ಗಮನವಹಿಸಿ ರೈತರನ್ನು ಪ್ರೋತ್ಸಾಹಿಸಿ, ಸರಿಯಾದ ಮಾರ್ಗದರ್ಶನ ನೀಡಿ, ಬೆಳೆಗೆ ಸರಿಯಾದ ಬೆಲೆ ನೀಡಿ ರೇಷ್ಮೆ ಉತ್ಪಾದನೆಯನ್ನು ಮತ್ತಷ್ಟು ಹೆಚ್ಚಿಸಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ರೇಷ್ಮೆ ಬೆಳೆಗಾರರನ್ನು ಉತ್ತಮ ಸ್ಥಿತಿಯತ್ತ ಕೊಂಡೊಯ್ಯಬೇಕಾಗಿದೆ.

**ಭಾರತದಲ್ಲಿ ರೇಷ್ಮೆ ಉತ್ಪಾದನೆಯ ಬೆಳವಣಿಗೆ**

ಇತ್ತೀಚಿನ ದಿನಗಳಲ್ಲಿ ಭಾರತವು ರೇಷ್ಮೆ ಬೆಳೆ ಲಾಭದಾಯಕವಾಗಿರುವುದನ್ನು ಗಮನಿಸಿ ಅದರ ಅಭಿವೃದ್ಧಿಗೆ ಗಮನ ಹರಿಸಲು ಪ್ರಾರಂಭಿಸಿದೆ. ಅದರ ಪ್ರಕಾರವಾಗಿ "ಸೆಂಟ್ರಲ್ ಸಿಲ್ಕ್ ಬೋರ್ಡ್" ವರದಿಯ ಪ್ರಕಾರ ಭಾರತವು 36,000 ಮೆ.ಟನ್ ಗಳಷ್ಟು ಕಚ್ಚಾ ರೇಷ್ಮೆಯನ್ನು ಉತ್ಪಾದಿಸುತ್ತಿದೆ. ಇದರಲ್ಲಿ "ಮಲ್ಬರಿ ಸಿಲ್ಕ್" ನಿಂದ 23,860 ಮೆ.ಟನ್, ನಾನ್ ಮಲ್ಬರಿ ಸಿಲ್ಕ್ ನಿಂದ 33,739 ಮೆ.ಟನ್‌ಗಳಷ್ಟು ರೇಷ್ಮೆಯನ್ನು ಉತ್ಪಾದನೆ ಮಾಡುತ್ತಿದೆ.ನಾನ್–ಮಲ್ಬರಿ ಸಿಲ್ಕ್‌ನ ತಳಿಗಳಾದ "ಎರಿ"ಯಿಂದ 6,935 ಮೆ.ಟನ್, "ಟಸಾರ್" ನಿಂದ 2,705 ಮೆ.ಟನ್ ಹಾಗೂ "ಮುಗ" ತಳಿಯಿಂದ 239 ಮೆ.ಟನ್ ಗಳಷ್ಟು ರೇಷ್ಮೆಯನ್ನು ಉತ್ಪಾದಿಸಲಾಗುತ್ತಿದೆ. ರೇಷ್ಮೆ ಉತ್ಪಾದನೆಯಲ್ಲಿ ಅತಿ ಹೆಚ್ಚಿನ ಕೊಡುಗೆಯನ್ನು ನೀಡಿರುವುದು ಮಲ್ಬರಿ ಸಿಲ್ಕ್. ಸಾಂಪ್ರದಾಯಿಕ ಮಿಶ್ರ ತಳಿಯಿಂದ ಸುಮಾರು 36,000 ಮೆ.ಟನ್. ಅಂದರೆ ಶೇ.96 ರಷ್ಟು ಉತ್ಪಾದನೆಯಾಗುತ್ತದೆ. ಹಾಗೆಯೇ ಮತ್ತೊಂದು ತಳಿಯಾದ ಬೈವೋಲ್ಟೀನ್ ನಮ್ಮ 7,000 ಮೆ.ಟನ್ ಗಳಷ್ಟು ಆಮದು ಮಾಡಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಒಂದು ಹೆಕ್ಟೇರ್‌ಗೆ ಸುಮಾರು 250 ಕೆ.ಜಿಯಷ್ಟು ರೇಷ್ಮೆ ಉತ್ಪಾದನೆ ಮಾಡಲಾಗುತ್ತಿದೆಯೆಂದು ವರದಿಯೊಂದು ತಿಳಿಸಿದೆ.

**ಕರ್ನಾಟಕದಲ್ಲಿ ರೇಷ್ಮೆ ಉದ್ಯಮದ ಬೆಳವಣಿಗೆ**

ಕರ್ನಾಟಕದಲ್ಲಿ ರೇಷ್ಮೆ ಬೆಳೆಯ ಬೆಳವಣಿಗೆಯನ್ನು ಗಮನಿಸುವುದಾದರೆ ಕರ್ನಾಟಕವನ್ನು ಮೊದಲು ಮೈಸೂರು ಪ್ರಾಂತ್ಯ ಎಂದು ಕರೆಯಲಾಗುತ್ತಿತ್ತು. ಕರ್ನಾಟಕದಲ್ಲಿ ಮುಖ್ಯವಾಗಿ ಶ್ರೀಗಂಧ, ಚಿನ್ನ ಮತ್ತು ಹಾಲಿನ ಉತ್ಪಾದನೆಯಲ್ಲಿ ಪ್ರಖ್ಯಾತಿಯನ್ನು ಪಡೆದುಕೊಂಡಿದೆ. ಇಂತಹ ಪ್ರಖ್ಯಾತಿಯನ್ನು ರೇಷ್ಮೆ ಉತ್ಪಾದನೆಯು ಸಹ ತಂದುಕೊಟ್ಟಿದೆ. ಕರ್ನಾಟಕ ರೇಷ್ಮೆ ವೈಭವ ಮಾಲಿಕೆಯ ಅಧ್ಯಾಯಗಳಲ್ಲಿ ರೇಷ್ಮೆಯ ಬಗ್ಗೆ ಮೊದಲ ದಾಖಲೆಯಿಂದ 1956 ರಲ್ಲಿನ ಕರ್ನಾಟಕದ ಏಕೀಕರಣದವರೆಗಿನ ಬೆಳವಣಿಗೆಯನ್ನು ತಿಳಿಯಬಹುದಾಗಿದೆ.

ಕ್ರಿ.ಶ. 1600ರಲ್ಲಿ ಬ್ರಿಟಿಷರು ಭಾರತಕ್ಕೆ ಬಂದು ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿಕೊಂಡು ವ್ಯಾಪಾರಕ್ಕೆಂದು ಬಂದರು. ಆದರೆ ಕೇವಲ ವ್ಯಾಪಾರವನ್ನು ಮಾತ್ರ ಮಾಡದೇ ಅಂದಿನ ಕಾಲದಲ್ಲಿ ಶ್ರೀಮಂತ ಬೆಳೆಯಾಗಿದ್ದ ರೇಷ್ಮೆ ಬೆಳೆಯನ್ನು ಹಾಗೂ ರೇಷ್ಮೆ ಉದ್ಯಮದ ಲಾಭವನ್ನು ಕಂಡು ತಾವೂ ಕೂಡ ರೇಷ್ಮೆ ಉದ್ಯಮವನ್ನು ಪ್ರಾರಂಭಿಸಲು ಮುಂದಾದರು. ಇದಕ್ಕಾಗಿ ಆಯ್ಕೆ ಮಾಡಿಕೊಂಡದ್ದು ಬಂಗಾಳವನ್ನು. ಏಕೆಂದರೆ ತಾವು ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿಕೊಂಡದ್ದು ಬಂಗಾಳದಲ್ಲಿಯೇ ಆದ್ದರಿಂದ ತಮ್ಮ ರೇಷ್ಮೆ ಉದ್ಯಮವನ್ನು ಪ್ರಾರಂಭಿಸಿ ಹೆಚ್ಚಿನ ಲಾಭವನ್ನು ಪಡೆದು ಭಾರತದಲ್ಲಿ ಬಂಗಾಳದ ರೇಷ್ಮೆಯನ್ನು ಉತ್ತಮ ರೇಷ್ಮೆಯನ್ನಾಗಿ ಪ್ರಖ್ಯಾತಿಗೊಳಿಸಿದರು.

ಮೈಸೂರು ಸಂಸ್ಥಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಟಿಪ್ಪು ಸುಲ್ತಾನರು ಲಾಭದಾಯಕವಾಗಿದ್ದ ಹಾಗೂ ಕಡಿಮೆ ಸಮಯದಲ್ಲಿ ಉತ್ಪಾದನೆ ಮಾಡಬಹುದಾಗಿದ್ದ ರೇಷ್ಮೆ ಉದ್ಯಮವನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಪಣತೊಟ್ಟರು. 1780–90 ರಲ್ಲಿ ಮೈಸೂರು ಪ್ರಾಂತ್ಯದಲ್ಲಿ ರೇಷ್ಮೆ ಉದ್ಯಮವನ್ನು ಪ್ರಾರಂಭಿಸಿದರು. ಇದೇ ವೇಳೆಗೆ ಮದ್ರಾಸಿನಲ್ಲಿ ಬ್ರಿಟಿಷರು ರೇಷ್ಮೆ ಉದ್ಯಮವನ್ನು ಪ್ರಾರಂಭಿಸಿದ್ದರು ಎಂದು ಹಲವು ಮೂಲಗಳಿಂದ ತಿಳಿಯಬಹುದಾಗಿದೆ.

ಟಿಪ್ಪುಸುಲ್ತಾನ್ ರೇಷ್ಮೆ ಉದ್ಯಮವನ್ನು ಪ್ರೋತ್ಸಾಹಿಸಲು "ಸುಲ್ತಾನಿ ಕಡ್ಡಿ" ಎಂಬ ಹಿಪ್ಪು ನೇರಳೆ ತಳಿಯನ್ನು ತರಿಸಿ ತಮ್ಮ ಮೈಸೂರು ಜಿಲ್ಲೆಯ ಮಳವಳ್ಳಿ ತಾಲೂಕಿನ ಧನಗೂರು ಎಂಬಲ್ಲಿ ಬೆಳೆಸಿದರೆಂದು ಇತಿಹಾಸದಿಂದ ತಿಳಿಯಬಹುದಾಗಿದೆ. ನಂತರದಲ್ಲಿ ದಿವಾನರಾದ ಪೂರ್ಣಯ್ಯನವರು ಚನ್ನಪಟ್ಟಣದಲ್ಲಿ ರೇಷ್ಮೆ ಉತ್ಪಾದನೆಯನ್ನು ಮಾಡಲು ಬಂದು ಇಲ್ಲಿಯೇ ನೆಲೆಸಿ ಕ್ರಿ.ಶ.1820 ರಲ್ಲಿ ಈ ಸ್ಥಳವನ್ನು ಪ್ರಮುಖ ರೇಷ್ಮೆ ಕೇಂದ್ರವನ್ನಾಗಿ ಮಾಡುತ್ತಾರೆ.

**ರಾಮನಗರದಲ್ಲಿ ರೇಷ್ಮೆ ಉತ್ಪಾದನೆಯ ಬೆಳವಣಿಗೆ**

ರಾಮನಗರದ ಗ್ರಾಮಗಳಲ್ಲಿ ವಾಸಿಸುವ ಜನರು ಶೇ.70 ರಷ್ಟು ಜನರು ಕೃಷಿಯನ್ನೇ ತಮ್ಮ ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಕೃಷಿಯೇ ಮುಖ್ಯವಾಗಿರುವ ಗ್ರಾಮೀಣ ಪ್ರದೇಶದಲ್ಲಿ ಇತರೆ ಬೆಳೆಗಳನ್ನು ಬೆಳೆಯುತ್ತಾ ಉಪಕಸುಬುಗಳನ್ನು ಸಹ ಮಾಡಿಕೊಂಡು ಬರುತ್ತಿದ್ದಾರೆ. ಅದರಲ್ಲಿ ರೇಷ್ಮೆ ಬೆಳೆಯು ಸಹ ಒಂದಾಗಿದೆ. ರೇಷ್ಮೆ ಬೆಳೆಯನ್ನು ಬೆಳೆಯಬೇಕಾದರೆ ರೈತರಿಗೆ ಸಾಕಷ್ಟು ಸಮಸ್ಯೆಗಳು ಎದುರಾಗುತ್ತವೆ. ಅವುಗಳನ್ನೆಲ್ಲಾ ಪರಿಹರಿಸಿಕೊಂಡು ಬೆಳೆಯನ್ನು ಬೆಳೆದರೆ ಲಾಭ ಕೈ ಸೇರುತ್ತದೆ. ಲಾಭವನ್ನು ಹೆಚ್ಚಿಸಿಕೊಳ್ಳಬೇಕೆಂದರೆ ರೇಷ್ಮೆ ಬೆಳೆಯನ್ನು ಹಂತ ಹಂತವಾಗಿ ಪಾಲನೆ–ಪೋಷಣೆ ಮಾಡಿ ಬೇಕಾದ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡಿ ಬೆಳೆಯಬೇಕಾಗುತ್ತದೆ.

ರೇಷ್ಮೆ ಬೆಳೆಯಲ್ಲಿ ಹುಳುಗಳನ್ನು ಸಾಕಿ ಅವುಗಳನ್ನು ನಿರ್ದಿಷ್ಟ ಹಂತಕ್ಕೆ ಬಂದ ನಂತರ ಅವುಗಳು ಕಟ್ಟಿದ ಗೂಡನ್ನು ಮಾರುಕಟ್ಟೆಯಲ್ಲಿ ಮಾರಿದ ನಂತರ ಲಾಭ ದೊರೆಯುತ್ತದೆ. ಈ ಬೆಳೆಯ ಕಾರ್ಯವು ಸತತವಾಗಿ 22–25 ದಿನಗಳೊಳಗೆ ನಡೆಯುತ್ತದೆ. ಇಷ್ಟು ದಿನಗಳಲ್ಲಿ ರೈತರು ರೇಷ್ಮೆ ಹುಳುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಸಾಕಿ ಬೆಳೆಯುತ್ತಾರೆ.

ರೇಷ್ಮೆ ಗೂಡನ್ನು ರೇಷ್ಮೆ ಎಳೆಗಳನ್ನಾಗಿ ಬಿಚ್ಚುವಂತಹ ಫಿಲೇಚರ್‌ಗಳಲ್ಲಿ ಹೆಚ್ಚಿನದಾಗಿ ಆರೋಗ್ಯದ ತೊಂದರೆಯನ್ನು ಕಾಣಬಹುದಾಗಿದೆ. ಕಾರ್ಮಿಕ ಇಲಾಖೆಯ ಪ್ರಕಾರ 175 ಫಿಲೇಚರ್‌ಗಳಿದ್ದು 963 ಮಂದಿ ಕಾರ್ಮಿಕರು ದುಡಿಯುತ್ತಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ 67 ಘಟಕಗಳಿದ್ದು, 323 ಮಂದಿ ಕಾರ್ಮಿಕರು, ಚನ್ನಪಟ್ಟಣದಲ್ಲಿ 14 ಘಟಕಗಳು 78 ಮಂದಿ, ಕನಕಪುರದಲ್ಲಿ 13 ಘಟಕಗಳು 72 ಮಂದಿ ಹಾಗೂ ಮಾಗಡಿಯಲ್ಲಿ 25 ಘಟಕಗಳಿದ್ದು 122 ಮಂದಿ ಕಾರ್ಮಿಕರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ರೇಷ್ಮೆ ಇಲಾಖೆಯ ಅಂಕಿ–ಅಂಶಗಳು ಇದಕ್ಕೆ ಭಿನ್ನವಾಗಿವೆ. ಜಿಲ್ಲೆಯಾದ್ಯಂತ ಸುಮಾರು 1633 ಫಿಲೇಚರ್‌ಗಳಿದ್ದು, 10 ಸಾವಿರಕ್ಕೂ ಅಧಿಕ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ ಸುಮಾರು 916, ಚನ್ನಪಟ್ಟಣ 183 ಘಟಕ, 3151 ಮಂದಿ ಪುರುಷರು, 3294 ಮಹಿಳೆಯರು ಸೇರಿದಂತೆ ಒಟ್ಟು 6445 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

**ಉದ್ದೇಶಗಳು**

1. ರೇಷ್ಮೆ ಬೆಳೆಗಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ತಿಳಿಯುವುದು.
2. ರೇಷ್ಮೆ ಬೆಳೆಯ ವಿಧಾನದ ಬಗ್ಗೆ ತಿಳಿದುಕೊಳ್ಳುವುದು.

## ಸಂಶೋಧನಾ ವಿಧಾನ

ಸಂಶೋಧನಾ ವಿಧಾನವು ಸಾಮಾನ್ಯವಾಗಿ ಸಮಸ್ಯೆಯನ್ನು ಪರಿಹರಿಸಲು ಒಂದು ಮಾರ್ಗಸೂಚಿ ವ್ಯವಸ್ಥೆಯಾಗಿದ್ದು. ಹಂತಗಳು, ಕಾರ್ಯಗಳು, ವಿಧಾನಗಳು, ತಂತ್ರಗಳು ಮತ್ತು ಸಾಧನಗಳಂತಹ ನಿರ್ದಿಷ್ಟ ಅಂಶಗಳನ್ನು ಹೊಂದಿರುತ್ತದೆ. ನಾವು ಸಂಶೋಧನಾ ವಿಧಾನದ ಬಗ್ಗೆ ಮಾತನಾಡುವುದಲ್ಲದೆ. ನಮ್ಮ ಸಂಶೋಧನಾ ಅಧ್ಯಯನದ ಸಂಧರ್ಭದಲ್ಲಿ ಬಳಸುವ ವಿಧಾನಗಳ ಹಿಂದಿನ ತರ್ಕವನ್ನು ಪರಿಗಣಿಸುತೇವೆ ಮತ್ತು ಒಂದು ನಿರ್ದಿಷ್ಟ ವಿಧಾನ ಅಥವಾ ತಂತ್ರವನ್ನು ಏಕೆ ಬಳಸುತ್ತಿದ್ದೇವೆ ಮತ್ತು ನಾವು ಇತರೆ ವಿಧಾನಗಳನ್ನು ಏಕೆ ಬಳಸುತ್ತಿಲ್ಲ ಎಂದು ವಿವರಿಸುತ್ತೇವೆ. ಆದ್ದರಿಂದ ಸಂಶೋಧನಾ ಫಲಿತಾಂಶಗಳು ಸಂಶೋಧಕರಿಂದ ಅಥವಾ ಇತರರಿಂದ ಮೌಲ್ಯಮಾಪನ ಮಾಡಲು ಸಮರ್ಥವಾಗಿವೆ. ಇಡೀ ಸಂಶೋಧನಾ ಯೋಜನೆಯನ್ನು ಸಂಘಟಿಸಿದ ಪ್ರಾಯೋಗಿಕ ಹಾಗೂ ವಿವರಣಾತ್ಮಕ ಮಾರ್ಗವನ್ನು ಇದು ಸೂಚಿಸುತ್ತದೆ.

**ಕೋಷ್ಟಕ 1: ರೇಷ್ಮೆಯಲ್ಲಿ ತೊಡಗಿರುವ ಮಾಹಿತದಾರರ ಜಾತಿವಾರು ವಿವರ**

| ಕ್ರ.ಸಂ. | ಜಾತಿ ವಿವರ | ಆವೃತ್ತಿ | % |
|---|---|---|---|
| 1 | ಪರಿಶಿಷ್ಟ ಜಾತಿ/ಪಂಗಡ | 16 | 32 |
| 2 | ಒಬಿಸಿ | 21 | 42 |
| 3 | ಸಾಮಾನ್ಯ | 13 | 26 |
| **ಒಟ್ಟು** | | **50** | **100** |

ಕೋಷ್ಟಕ 1 ರಲ್ಲಿ ಸಂದರ್ಶನಕ್ಕೆ ಒಳಪಡಿಸಿದ ಸುಮಾರು 50 ರೈತರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 16 ಅಂದರೆ ಶೇ.32% ರಷ್ಟು, ಸಾಮಾನ್ಯ ಸಮುದಾಯಕ್ಕೆ ಸೇರಿದ 13 ಅಂದರೆ ಶೇ.26% ರಷ್ಟು, ಇತರೆ ಸಮುಯದಾಯಕ್ಕೆ ಸೇರಿದ 21 ಅಂದರೆ ಶೇ.42% ರಷ್ಟು ರೈತರು ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಇಲ್ಲಿ ಜಾತಿಯನ್ನು ಗಮನಿಸಿದರೆ ಹೆಚ್ಚಿನದಾಗಿ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಸಮುದಾಯದವರು ರೇಷ್ಮೆ ಬೆಳೆಯನ್ನು ಬೆಳೆಯುತ್ತಿರುವುದು ಕಂಡು ಬರುತ್ತದೆ.

**ಕೋಷ್ಟಕ 2: ರೇಷ್ಮೆ ಬೆಳೆಗಾರರ ವಾರ್ಷಿಕ ಆದಾಯದ ವಿವರ**

| ಕ್ರ. ಸಂ | ವಾರ್ಷಿಕ ಆದಾಯ | ಆವೃತ್ತಿ | % |
|---|---|---|---|
| 1 | 15,000 – 20,000 | 13 | 26 |
| 2 | 21,000 – 30,000 | 12 | 24 |
| 3 | 41,000 – 50,000 | 08 | 16 |
| 4 | 51,000 ಕ್ಕಿಂತ ಅಧಿಕ | 17 | 34 |
| **ಒಟ್ಟು** | | **50** | **100** |

ಕೋಷ್ಟಕ 2ರಲ್ಲಿ ರೇಷ್ಮೆ ಬೆಳೆಗಾರರ ವಾರ್ಷಿಕ ಆದಾಯದ ವಿವರವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಶೇ.26 ರಷ್ಟು ರೈತರು 15 ರಿಂದ 20 ಸಾವಿರ ಆದಾಯವನ್ನು ಹೊಂದಿದ್ದಾರೆ. ಶೇ.24 ರಷ್ಟು ರೈತರು 21–30 ಸಾವಿರ, ಶೇ.16 ರಷ್ಟು ರೈತರಯ 41–50 ಸಾವಿರ ಹಾಗೂ ಶೇ.34 ರೈತರು 51 ಸಾವಿರಕ್ಕಿಂತ ಹೆಚ್ಚು ಆದಾಯವನ್ನು ಹೊಂದಿದ್ದಾರೆ. ಅವಲೋಕನದ ಮೂಲಕ ರೇಷ್ಮೆಗೂಡಿನ ಗುಣಮಟ್ಟ ಆಧಾರದ ಮೇಲೆ ಬೆಲೆ ನಿರ್ಧರಿತವಾಗುವುದರಿಂದ ರೇಷ್ಮೆ ಬೆಲೆಯಲ್ಲಿ ಏರಿಳಿತಗಳು ಕಂಡು ಬರುವುದರಿಂದ ವಾರ್ಷಿಕ ಆದಾಯದಲ್ಲಿ ಏರಿಪೇರುಗಳು ಕಂಡು ಬರುತ್ತದೆ.

**ರೇಖಾಚಿತ್ರ 1: ರೇಷ್ಮೆ ಬೆಳೆಗಾರರ ಜಮೀನಿನ ವಿವರ**



ಮೇಲಿನ ರೇಖಾಚಿತ್ರದಲ್ಲಿ ರೇಷ್ಮೆ ಬೆಳೆಯುವ ರೈತರಿಗೆ ಎಷ್ಟು ಭೂಮಿ ಇದೆ ಎಂಬುದನ್ನು ತಿಳಿಯಬಹುದಾಗಿದೆ. ಅದರಂತೆ 1 ಎಕರೆ ಕ್ಕಿಂತ ಕಡಿಮೆ ಜಮೀನಿರುವ 4 ಜನರು ಅಂದರೆ ಶೇ.8% ರಷ್ಟು, 2 ಎಕರೆ ಜಮೀನಿರುವಂತಹ 14 ಜನರು ಅಂದರೆ ಶೇ.28% ರಷ್ಟು, 3–4 ಎಕರೆ ಜಮೀನಿರುವಂತಹ 24 ಜನರು ಅಂದರೆ ಶೇ.48% ರಷ್ಟು ಹಾಗೂ 5 ಎಕರೆ ಕ್ಕಿಂತ ಹೆಚ್ಚು ಜಮೀನನ್ನು ಹೊಂದಿರುವ ರೈತರು 8 ಜನರು ಅಂದರೆ ಶೇ.16% ರಷ್ಟು ರೈತರು ಜಮೀನನ್ನು ಹೊಂದಿದ್ದಾರೆ ಎಂದು ರೇಷ್ಮೆ ಕೃಷಿಕರು ತಮ್ಮ ಅಭಿಪ್ರಾಯ ಮತ್ತು ಜಮೀನಿನ ಮಾಹಿತಿಯನ್ನು ನೀಡಿದ್ದಾರೆ.

**ಕೋಷ್ಟಕ 3: ರೇಷ್ಮೆ ಮೊಟ್ಟೆಗಳನ್ನು ಎಲ್ಲಿಂದ ತರುತ್ತಾರೆ ಎಂಬುದರ ವಿವರ**

| ಕ್ರ.ಸಂ. | ಆಯ್ಕೆಗಳು | ಆವೃತ್ತಿ | % |
|---|---|---|---|
| 1 | ಖಾಸಗಿ ರೇಷ್ಮೆ ಮೊಟ್ಟೆ ಗ್ರೆನೇಜ್ | 13 | 26 |
| 2 | ಚಾಕಿ ಸಾಕಾಣಿಕಾ ಕೇಂದ್ರ | 21 | 42 |
| 3 | ಸರ್ಕಾರಿ ರೇಷ್ಮೆ ಮೊಟ್ಟೆ ಗ್ರೆನೇಜ್ | 07 | 14 |
| 4 | ಕೃಷಿ ಇಲಾಖೆ | 09 | 18 |
| **ಒಟ್ಟು** | | **50** | **100** |

ಈ ಮೇಲಿನ ಕೋಷ್ಟಕದಲ್ಲಿ ರೇಷ್ಮೆ ಬೆಳೆಗಾರರು ರೇಷ್ಮೆ ಮೊಟ್ಟೆಯನ್ನು ಎಲ್ಲಿಂದ ತರುತ್ತಾರೆ ಎಂಬುದರ ಮಾಹಿತಿಯನ್ನು ನೀಡಲಾಗಿದೆ. ಖಾಸಗಿ ರೇಷ್ಮೆ ಮೊಟ್ಟೆ ಗ್ರೆನೇಜ್‌ನಿಂದ 13 ಮಂದಿ ಅಂದರೆ ಶೇ.26% ರಷ್ಟು ರೈತರು ಚಾಕಿ ಸಾಕಾಣಿಕಾ ಕೇಂದ್ರದಿಂದ, 21 ಜನರು ಅಂದರೆ ಶೇ.42% ರಷ್ಟು, ಸರ್ಕಾರಿ ರೇಷ್ಮೆ ಮೊಟ್ಟೆ ಗ್ರೆನೇಜ್ ನಿಂದ 7 ಜನರು ಅಂದರೆ ಶೇ.14% ಹಾಗೂ ಕೃಷಿ ಇಲಾಖೆಯಿಂದ 9 ಜನರು ಅಂದರೆ ಶೇ.18% ರಷ್ಟು ರೇಷ್ಮೆ ಮೊಟ್ಟೆಯನ್ನು ತರುತ್ತಾರೆ.

**ರೇಖಾಚಿತ್ರ 2: ರೇಷ್ಮೆ ಬೆಳೆಗಾರರು ಎಷ್ಟುಮೊಟ್ಟೆಗಳ ರೇಷ್ಮೆಯನ್ನು ಸಾಕುತ್ತಾರೆ ಎಂಬುದರ ವಿವರ**




ಈ ಮೇಲಿನ ಕೋಷ್ಟಕದಲ್ಲಿ ರೇಷ್ಮೆ ಬೆಳೆಗಾರರು ಎಷ್ಟು ಮೊಟ್ಟೆಗಳ ರೇಷ್ಮೆ ಬೆಳೆಯುತ್ತಿದ್ದಾರೆ ಎಂಬುದರ ವಿವರ ತಿಳಿಸಲಾಗಿದೆ. ಅದರಂತೆ 50 ಮೊಟ್ಟೆ ಕ್ಕಿಂತ ಕಡಿಮೆ ರೇಷ್ಮೆಯನ್ನು 10 ಜನರಲ್ಲಿ ಶೇ.20 ರಷ್ಟು, 50–75 ಮೊಟ್ಟೆಗಳನ್ನು 15 ಜನರಲ್ಲಿ ಶೇ.30% ರಷ್ಟು, 100 ಮೊಟ್ಟೆಗಳನ್ನು 17 ಜನರಲ್ಲಿ ಶೇ.34% ರಷ್ಟು ಹಾಗೂ 150 ಮೊಟ್ಟೆ ಕ್ಕಿಂತ ಹೆಚ್ಚು 8 ಜನರಲ್ಲಿ ಶೇ.16% ರಷ್ಟು ಜನರು ರೇಷ್ಮೆ ಮೊಟ್ಟೆ ಸಾಕುತ್ತಾರೆ ಎಂಬುದರ ವಿವರ ಸಂದರ್ಶನದಲ್ಲಿ ತಿಳಸಲಾಗಿದೆ. ಸಂದರ್ಶನ ಮೂಲಕ 50–75 ಮೊಟ್ಟೆಯನ್ನು ಸಾಕುವವರು ಪರಿಸ್ಥಿತಿಯು ಕೆಳಮಟ್ಟದಲ್ಲಿದೆ ಮತ್ತು ಬಂಡವಾಳದ ಸಮಸ್ಯೆ ಹಾಗೆಯೇ ಜಾಗದ ಸಮಸ್ಯೆಯು ಇರುವುದಾಗಿ ಕಂಡು ಬಂದಿದೆ.

**ಉಪಸಂಹಾರ**

ರೇಷ್ಮೆಯು ಒಂದು ಲಾಭದಾಯಕವಾಗಿದ್ದು ಕ್ರಿ.ಪೂ.ದಿಂದಲೂ ಸಹ ಅಸ್ತಿತ್ವದಲ್ಲಿದೆ. ಭಾರತವು ರೇಷ್ಮೆ ಉತ್ಪಾದನೆಯಲ್ಲಿ 2ನೇ ಸ್ಥಾನವನ್ನು ಪಡೆದಿದೆ. ಐಷಾರಾಮಿ ವಸ್ತುವಾದ ರೇಷ್ಮೆಯು ಬೆಲೆ ಬಾಳುವಂತಹ ಪದಾರ್ಥವಾಗಿದೆ. ಭಾರತದಲ್ಲಿ ಅತೀ ಹೆಚ್ಚು ರೇಷ್ಮೆ ಬೆಳೆಯುವುದು ಕರ್ನಾಟಕ ರಾಜ್ಯದಲ್ಲಿ. ಅದರಲ್ಲಿಯು ರಾಮನಗರ ಜಿಲ್ಲೆಯಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ. ಇಲ್ಲಿನ ರೈತರು ರೇಷ್ಮೆ ಬೆಳೆಯನ್ನೇ ತಮ್ಮ ಪ್ರಮುಖ ಕಸುಬುನ್ನಾಗಿ

ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ರಾಮನಗರವು ರೇಷ್ಮೆ ನಾಡೆಂದೆ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ರೇಷ್ಮೆ ಬೆಳೆಯುವ ರೈತರ ಬಗ್ಗೆ ಮತ್ತು ರೇಷ್ಮೆ ಗೂಡಿನ ಬಗ್ಗೆ ಹೆಚ್ಚಿನ ಅಧ್ಯಯನದ ಅವಶ್ಯಕತೆಯಿದೆ.

**ಪರಾಮರ್ಶನ ಗ್ರಂಥಗಳು**


- ಕಲ್ಲೂ ಎಂ.ಎಸ್. (2020). ರಾಮನಗರ ಜಿಲ್ಲೆಯ ಅಂಕಿ ಅಂಶಗಳ ನೋಟ. ಜಿಲ್ಲೆಯ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ
- ಕರಿಯಪ್ಪ, ಜಿ.ಎಸ್. (2023). ರೇಷ್ಮೆ ಕೃಷಿ. ರೇಷ್ಮೆ ನಿರ್ದೇಶನಾಲಯ.
- ಕೃಷ್ಣಮೂರ್ತಿ, ಹೆಚ್.ಆರ್. (2001). ಭಾರತದ ಆರ್ಥಿಕ ವ್ಯವಸ್ಥೆ. ಪೂರ್ಣಿಮ ಪ್ರಿಂಟರ್.
- ನಾಗಾಂಬಿಕಾದೇವಿ ಎನ್. (2012). ರೇಷ್ಮೆ ಕೃಷಿ ರೇಷ್ಮೆಗೂಡಿನ ವಹಿವಾಟು ಹಾಗೂ ಧಾರಣೆ. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು.
- ಪಾರ್ಥ. (2008). ರಾಮನಗರ ಜಿಲ್ಲೆಯ ಒಂದು ಸಾಂಸ್ಕೃತಿಕ ಅಧ್ಯಯನ. ಬೆಂಗಳೂರು ವಿಶ್ವವಿದ್ಯಾಲಯ.
- ಪುಟ್ಟರಾಜು. (2009). ರೇಷ್ಮೆ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ. ಬೆಂಗಳೂರು ವಿಶ್ವವಿದ್ಯಾಲಯ.
- ರೇಷ್ಮೆ ಇಲಾಖೆ ಕೈಪಿಡಿ. (2023) ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ರೇಷ್ಮೆ ಮಂಡಳಿ.